ಕೊಳ್ಳೇಗಾಲದಲ್ಲಿರುವ ಹೆಚ್ಚಿಗೆ ಅರಣ್ಯ ಪ್ರದೇಶವನ್ನು ಕನಕಪುರ ವಲಯಕ್ಕೆ ಸ್ಥಳಾಂತರಿಸಿರುವುದು.

ಪ್ರಶ್ನೆ(ಪ್ರಶ್ನೋತ್ತರ)

ಶ್ರೀ ರಾಜುಗೌಡ ಜಿ.(ಹನೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಲ್ಲಿರುವ ಹೆಚ್ಚಿಗೆ ಅರಣ್ಯ ಪ್ರದೇಶವನ್ನು ಕನಕಪುರ (ಡಿ.ಸಿ.ಎಫ್) ವಲಯಕ್ಕೆ ಸ್ಥಳಾಂತರಿಸಲು ಕಾರಣ ಏನು?

ಆ) ಸಾರ್ವಜನಿಕರು ಕಛೇರಿಗೆ ಹೋಗಲು ತೊಂದರೆ ಆಗುವುದರಿಂದ ಅಲ್ಲಿಯ ಡಿ.ಸಿ.ಎಫ್. ಕಛೇರಿಯನ್ನು ಕೊಳ್ಳೇಗಾಲಕ್ಕೆ ಸ್ಥಳಾಂತರಿಸದಿರಲು ಕಾರಣಗಳೇನು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು):

ಅ) ಸಂಖ್ಯೆ ಎಹೆಚ್ಎಫ್ಎಫ್ಳ: ಎಫ್ಡಬ್ಲ್ಯೂಎಲ್ ೮೭, ದಿನಾಂಕ: ೧೪.೧.೧೯೮೭ರ ಸರ್ಕಾರಿ ಆದೇಶದ ಪ್ರಕಾರ ಕಾವೇರಿ ನದಿ ದಡದ ಎರಡು ಕಡೆ ಇರುವ ಅರಣ್ಯ ಪ್ರದೇಶಗಳನ್ನು ಸೇರಿಸಿ, ವನ್ಯಪ್ರಾಣಿಗಳನ್ನು ರಕ್ಷಿಸುವ ಉದ್ದೇಶದಿಂದ ಕಾವೇರಿ ವನ್ಯಪ್ರಾಣಿ ವಿಭಾಗವನ್ನು ರಚಿಸಲಾಯಿತು. ಈ ವಿಭಾಗಕ್ಕೆ ಕನಕಪುರ ತಾಲ್ಲೂಕು, ಮಳವಳ್ಳಿ ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಅರಣ್ಯ ಪ್ರದೇಶವನ್ನು ಸೇರಿಸಿ ಕಾವೇರಿ ವನ್ಯಪ್ರಾಣಿ ವಿಭಾಗವನ್ನು ರಚಿಸಲಾಗಿದೆ.

ಆ) ಸಾರ್ವಜನಿಕರಿಗೆ ತೊಂದರೆ ಆಗದಂತೆ ಅವರ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಕೊಳ್ಳೇಗಾಲ ತಾಲ್ಲೂಕಿನ ಹನೂರು, ಕೌದಳ್ಳಿ ಮತ್ತು ಮಹದೇಶ್ವರ ಬೆಟ್ಟದಲ್ಲಿ ವಲಯಾರಣ್ಯಾಧಿಕಾರಿಗಳ ಕಛೇರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗಳು ಇರುತ್ತವೆ. ಅಲ್ಲದೆ ಕನಕಪುರದಲ್ಲಿ ಕನಕಪುರ ವನ್ಯಜೀವಿ ವಲಯದ ಕಛೇರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ವನ್ಯಜೀವಿ ವಿಭಾಗದ ಕಛೇರಿಗಳು ಇರುತ್ತವೆ. ಆದುದರಿಂದ ಸಾರ್ವಜನಿಕರಿಗೆ ಯಾವ ತೊಂದರೆಯು ಆಗಲಾರದು.

ಶ್ರೀ ಜಿ.ರಾಜೂಗೌಡ: ಮಾನ್ಯ ಅಧ್ಯಕ್ಷರೆ, ಈ ಕೊಳ್ಳೇಗಾಲ ಅರಣ್ಯ ವಿಸ್ತೀರ್ಣ ಇಡೀ ರಾಜ್ಯದಲ್ಲಿ ನಾಲ್ಕನೇ ಸ್ಥಾನದಲ್ಲಿತ್ತು. ಅದನ್ನು ಒಡೆದು ವಿಚಿತ್ರ ಮಾಡಿ ಅದರ ಅಸ್ತಿತ್ವವನ್ನೇ ಹೊಗಲಾಡಿಸಿದಿರಿ. ಒಂದು ಚಾಮರಾಜನಗರ ವಿಭಾಗಕ್ಕೆ ಹೋಗಿದೆ. ಮತ್ತೊಂದು ಕನಕಪುರಕ್ಕೆ ಹೋಗಿದೆ. ದಯಮಾಡಿ ಮತ್ತೆ ಮೊದಲಿನ ರೀತಿಯಲ್ಲೇ

ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಪಡುತ್ತೀರಾ ಎಂದು ತಿಳಿಸಬೇಕು.

ಶ್ರೀ ಕೆ.ಎಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ೧೪.೧.೮೭ರಲ್ಲಿ ಮಾಡಲಾಗಿದೆ. ಪುನರ್ ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇಲ್ಲದ ಹಾಗೆ ಎಂದು ಹೇಳಿ ಸರ್ಕಾರದ ಒಂದು ಅಭಿಪ್ರಾಯ.

ಶ್ರೀ ಜಿ.ರಾಜೂಗೌಡ: ಸ್ವಾಮಿ, ಯಾವನಾದರೂ ಒಬ್ಬ ವ್ಯಕ್ತಿ ವನ್ಯ ಜೀವಿ ಗುರಿಗೆ ಸಿಕ್ಕಿ ಪ್ರಾಣ ಕಳೆದುಕೊಂಡಾಗ, ಪರಿಹಾರ ತೆಗೆದುಕೊಳ್ಳಬೇಕಾದಂತಹ ವ್ಯಕ್ತಿ ಕನಕಪುರಕ್ಕೆ ೮-೧೦ ಸಾರಿ ಹೋಗಬೇಕು. ನೀವು ಕೊಡತಕ್ಕಂಥಹ ಪರಿಹಾರದ ಹಣ ಅರ್ಧ ಖರ್ಚಾಗಿರುತ್ತದೆ. ದಯಮಾಡಿ ರೈತರ ಹಿತವನ್ನು ಕಾಪಾಡಬೇಕು ಎಂಬ ಇಚ್ಛೆ ತಮಗೆ ಇದ್ದರೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯನ್ನು ಕೊಳ್ಳೇಗಾಲದಲ್ಲಿ ಇರಿಸಿ. ಕನಕಪುರದಲ್ಲಿ ಇರಿಸಿದರೆ ಅಧಿಕಾರಿಗಳ ಹಿತವನ್ನು ಕಾಪಾಡಿದ ಹಾಗೆ ಆಗುತ್ತದೆ. ಅವರ ಮಕ್ಕಳು ಬೆಂಗಳೂರಿನಲ್ಲಿ ಓದುವುದಕ್ಕೆ ಅನುಕೂಲ ಆಗುತ್ತದೆ. ಅಲ್ಲೂ ಕೂಡ ಕಳಿಸುವ ಹಾಗೆ ಇಲ್ಲ. ದಯಮಾಡಿ ನನ್ನ ತಾಲ್ಲೂಕಿನ ಜನರ ಹಿತರಕ್ಷಣೆಯನ್ನು ನಾವು ಮಾಡಬೇಕು ಎನ್ನುವ ಇಚ್ಛೆ ಇದ್ದರೆ ಖಂಡಿತವಾಗಿ ತಾವು ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯನ್ನು ಕೊಳ್ಳೇಗಾಲದಲ್ಲಿ ತರುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಕೆ.ಎಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲದಲ್ಲಿ ಈಗ ಒಬ್ಬ ಡಿಸಿಎಫ್ ಕಛೇರಿ ಇದೆ.

ಶ್ರೀ ಜಿ.ರಾಜೂಗೌಡ: ಈಗ ಇರುವುದು ಎಸಿಎಫ್, ಡಿಸಿಎಫ್ ಮಾಡಿ ಎಂದು ಕೇಳುತ್ತಿರುವುದು. ಮೊದಲು ಅಲ್ಲಿ ಡಿಸಿಎಫ್ ಇದ್ದರು. ತಾವು ಕನಕಪುರಕ್ಕೆ ವರ್ಗ ಮಾಡಿದ್ದೀರಿ.

ಶ್ರೀ ಕೆ.ಎಚ್.ರಂಗನಾಥ್: ಅಲ್ಲೊಬ್ಬ ಡಿಸಿಎಫ್ ಇದ್ದಾರೆ, ಇಲ್ಲೊಬ್ಬ ಡಿಸಿಎಫ್ ಇದ್ದಾರೆ.

ಶ್ರೀ ಜಿ.ರಾಜೂಗೌಡ: ಡಿಸಿಎಫ್ ಇರುವುದು ಕನಕಪುರದಲ್ಲಿ. ಅದನ್ನು ಈಗ ಬದಲಾವಣೆ ಮಾಡಿಕೊಡಿ ಎಂದು ಕೇಳುತ್ತಿರುವುದು.

ಶ್ರೀ ಕೆ.ಎಚ್.ರಂಗನಾಥ್: ಮಾನ್ಯ ಸದಸ್ಯರು ಗಲಾಟೆಗೆ ಏನಾದರೂ ಹೋಗಿದ್ದಾರೋ ಏನೋ ಗೊತ್ತಿಲ್ಲ.

ಶ್ರೀ ಜಿ.ರಾಜೂಗೌಡ: ನನಗೆ ಅರ್ಥ ಆಗಲಿಲ್ಲ. ದಯಮಾಡಿ ಹೇಳಿ.

ಶ್ರೀ ಬಿ.ಸೋಮಶೇಖರ್: ಕೊಳ್ಳೇಗಾಲ ಹಾಗೂ ಕನಕಪುರದ ಮಧ್ಯೆ ಮಳವಳ್ಳಿಗೆ ಮಾಡಿ.

ಶ್ರೀ ಕೆ.ಎಚ್.ರಂಗನಾಥ್: ಇದು ಹೇಗೆ ಆಗಿದೆ ಎಂದರೆ ೧೯೪೭ರಲ್ಲಿ ಕೊಳ್ಳೇಗಾಲದ ಕೆಲವು ಭಾಗ, ಮಳವಳ್ಳಿಯ ಕೆಲವು ಭಾಗ, ಕನಕಪುರದ ಕೆಲವು ಭಾಗದಿಂದ ಒಂದು ಮಾಡಿ ಆಗಿದೆ. ಹಾಗೆಯೆ ಕನಕಪುರದಲ್ಲಿ ಒಂದು ಮಾಡಲಾಗಿದೆ. ಆದ್ದರಿಂದ ಹೆಚ್ಚು ದೂರ ಏನೂ ಇಲ್ಲ. ಆದ್ದರಿಂದ ೧೯೮೨ರಲ್ಲಿ ಆಗಿರುವುದನ್ನು ನಾವು ಈಗ ಬದಲಾವಣೆ ಮಾಡತಕ್ಕದ್ದು ಸೂಕ್ತ ಆಗಲಾರದು ಎಂದು ಹೇಳಿ ನನ್ನ ಅಭಿಪ್ರಾಯ.

ಶ್ರೀ ಜಿ.ರಾಜೂಗೌಡ: ನನಗೆ ತಿಳಿದ ಮಟ್ಟಿಗೆ ಕೊಳ್ಳೇಗಾಲ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಆಗಿತ್ತು. ಯಾರೋ ಅದನ್ನು ಬದಲು ಮಾಡಿದ್ದಾರೆಂದು ನನಗೆ ತಿಳಿದು ಬಂತು. ದಯವಿಟ್ಟು ಕೊಳ್ಳೇಗಾಲಕ್ಕೆ ಮಾಡಿಕೊಡಿ ಅದರ ಜನರ ಹಿತರಕ್ಷಣೆ ಆಗುತ್ತದೆ.

ಶ್ರೀ ಕೆ.ಎಚ್.ರಂಗನಾಥ್: ಪರಿಶೀಲನೆ ಮಾಡೋಣ.

ಜಿಲ್ಲಾ ಗೆಝೆಟೀರ್‌ಗಳ ಪ್ರಕಟಣೆ.

೩೨೯(೩೨೭೬)

ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ): ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನೂತನ ಜಿಲ್ಲೆಗಳೂ ಸೇರಿದಂತೆ ಎಲ್ಲಾ ಜಿಲ್ಲಾ ಗೆಝೆಟೀರ್‌ಗಳನ್ನು ಕನ್ನಡದಲ್ಲಿ ಪ್ರಕಟಿಸಲಾಗಿದೆಯೆ; ಇಲ್ಲವಾದಲ್ಲಿ ಉಳಿದಿರುವ ಜಿಲ್ಲೆಗಳ ಗೆಝೆಟಿಯರ್‌ಗಳನ್ನು ಎಂದಿನಿಂದ ಪ್ರಕಟಿಸಲು ಕ್ರಮ ಜರುಗಿಸಲಾಗುವುದು?

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಕೆಲವೊಂದು ಜಾತಿವರ್ಗಗಳ ಏವರಗಳು ಹಿಂದಿನ ಜಿಲ್ಲಾ ಗೆಝೆಟೀರ್‌ನಲ್ಲಿ ನಮೂದಿಸಿಲ್ಲವಾಗಿದ್ದು ಅವುಗಳನ್ನು ಗುರುತಿಸಿ ಸೇರಿಸಲು ಕ್ರಮ ಜರುಗಿಸುವರೆ?

ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನೇಕಾರಿಕೆ ಮತ್ತು ನೇಕಾರ ಜನಾಂಗಗಳ ಬಗ್ಗೆ ಗೆಝೆಟೀರ್‌ನಲ್ಲಿ ಏವರಗಳು ಸೂಕ್ತ ಪ್ರಮಾಣದಲ್ಲಿ